<u>ದಿನಾಂಕಃ 07-04-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>
<u>ಪಾಟೀ ಸವಾಲುಃ 1 ನೇ ವಾದಿ ಪರ ಶ್ರೀ.ಎನ್ ಕೆ ವಕೀಲರಿಂದಃ</u>

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ ಆಂಗ್ಲ ಭಾಷೆ ಸ್ವಲ್ಪ ಓದಲು ಬರೆಯಲು ಬರುತ್ತದೆ. ನನ್ನ ಮದುವೆ ಆಗಿರುತ್ತದೆ. ನನ್ನ ಮದುವೆ ಆಗಸ್ಟ 2018 ರಲ್ಲಿ ಆಗಿರುತ್ತದೆ. ನನ್ನ ಹೆಂಡತಿ ಹೆಸರು ಲಕ್ಷ್ಮಿ ಗಾಯತ್ರಿ ಆಗಿರುತ್ತದೆ. ನಮ್ಮ ಮನೆಯಲ್ಲಿ ಒಟ್ಟು 10 ಜನ ವಾಸವಾಗಿರುತ್ತೇವೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ತಂದೆ ತಾಯಿ ಮತ್ತು ನನ್ನ ತಂದೆಯ ಅಮ್ಮ, ನನ್ನ ತಾಯಿಯ ಅಪ್ಪ ಅಮ್ಮ, ನನ್ನ ತಮ್ಮ, ನನ್ನ ಇಬ್ಬರು ಮಕ್ಕಳು ವಾಸವಾಗಿರುತ್ತೇವೆ. ನನ್ನ ಅಕ್ಕ ಗೀತ ಈಗ ಅವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ನನ್ನ ಅಕ್ಕ ಅವಳ ಗಂಡನ ಮನೆಯಲ್ಲಿ ಇರುವ ಬಗ್ಗೆ ನಾನು ಯಾವುದೇ ದಾಖಲೆ ನೀಡಿರುವುದಿಲ್ಲ ಮತ್ತು ವಾದಪತ್ರ ತಿದ್ದುಪಡಿ ಮಾಡಿರುವುದಿಲ್ಲ.

ವಾದಿ 1 ಮತ್ತು 3 ನನಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಯಾವುದೇ ಅದಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ. ನನ್ನ ಅಕ್ಕ 2014 ರಲ್ಲಿ ಮದುವೆ ಆದಾಗಿನಿಂದ ಅವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ಅಕ್ಕ ಪ್ರತ್ಯೇಕವಾಗಿ ವಾಸವಾಗಿದ್ದು ಅನೋನ್ಯವಾಗಿರುತ್ತಾರೆ ಎಂದರೆ ಸರಿ. ಈ ದಾವೆ ಸಲ್ಲಿಸಿದ ನಂತರ ನಾನು ನಮ್ಮ ಕುಟುಂಬದಿಂದ ಬೇರೆ ಆಗಿ ವಾಸವಾಗಿರುತ್ತೇನೆ. ನನ್ನ ತಂದೆ ಮತ್ತು ತಾಯಿ ಅನೋನ್ಯವಾಗಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ತಾಯಿ ಹೆಸರು ಸರಸ್ವತಮ್ಮ. ಅವರು ಆರೋಗ್ಯವಾಗಿರುತ್ತಾರೆ.

ಮಾಲೂರು ಪೋಲೀಸ ಠಾಣೆಯಲ್ಲಿ ನನ್ನ ವಿರುದ್ದ ಮತ್ತು ನಮ್ಮ ಕುಟುಂಬದ ಇನ್ನಿತರ ಸದಸ್ಯರ ವಿರುದ್ದ ಪ್ರಕರಣ ಇರುತ್ತದೆ. ಸಾಕ್ಷಿ ಮುಂದುವರಿದು ಅದು ಸುಳ್ಳು ಕೇಸು ಇರುತ್ತದೆ ಎಂದು ಹೇಳುತ್ತಾರೆ. ನಾನು ಸದರಿ ಕೇಸಿನ ಬಗ್ಗೆ ನಾನು ಸಿ.ಸಿ.ಸಂಖ್ಯೆ 3712/2025 ರ ಕುರಿತು ತಿಳಿದುಕೊಂಡಿರುವುದಿಲ್ಲ. ಪಿ.ಸಿ.ಆರ್. ಸಂಖ್ಯೆ 528/2024 ರ ಕುರಿತು ನನಗೆ ಮಾಹಿತಿ ಇರುತ್ತದೆ. ನಾನು ವಿಭಾಗ ಕೋರಿ ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ಒಂದು ಬೊರ್ ವೆಲ್ ಇದ್ದು ಅದು ನನಗೆ ಈ ದಾವೆ ಹಾಕುವ ಮುಂಚೆಯಿಂದಲೂ ಗೊತ್ತು ಎಂದರೆ ಸರಿ. ನಾನು ವಾದಪತ್ರದಲ್ಲಿ ಬೋರ ವೆಲ್ ಇರುವ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ.

ನಮ್ಮ ಕುಟುಂಬಕ್ಕೆ ಮಾಲೂರು ಹೊರತುಪಡಿಸಿ ಮಾರಸಂದ್ರ ಗ್ರಾಮದಲ್ಲಿ ಸೈಟು ಇರುತ್ತದೆ. ನನಗೆ ಸೈಟಿನ ನಂಬರ ಗೊತ್ತಿರುವುದಿಲ್ಲ ಅದು ನನ್ನ ತಂದೆ ಹೆಸರಿನಲ್ಲಿ ಇರುತ್ತದೆ. ನನಗೆ ಸ್ವತ್ತಿನ ಚಕ್ಕಬಂದಿ ಹೇಳಲು ಆಗುತ್ತದೆ. ನಾನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಮಾರಸಂದ್ರದಲ್ಲಿ ಕಟ್ಟಿರುವ ಮನೆಯಲ್ಲಿ ವಾಸವಾಗಿದ್ದೆ. ಈ ದಾವೆ ಸಲ್ಲಿಸಿದ ನಂತರ ನಾನು ಮನೆಯಿಂದ ಬೇರೆ ಆಗಿ ವಾಸವಾಗಿರುತ್ತೇನೆ. ನಾನು ಬೇರೆ ಆಗಿ ವಾಸವಾಗಿರುವ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಾನು ದಾವೆ ಹಾಕಿದ ಒಂದು ತಿಂಗಳ ನಂತರ ಮನೆಯಿಂದ ಆಚೆ ಬಂದು ಮಾಲೂರಿನ ಡಿಗ್ರಿ ಕಾಲೇಜು ಟಿ.ಎಂ.ಸಿ. ಲೇಔಟ ನಲ್ಲಿ ವಾಸವಾಗಿರುತ್ತೇನೆ. ನಾನು ವಿಳಾಸ ಬದಲಾವಣೆ ಆದ ಬಗ್ಗೆ ಆಧಾರ ಕಾರ್ಡನಲ್ಲಿ ಮತ್ತು ಇನ್ನಿತರ ದಾಖಲೆಗಳಲ್ಲಿ

ತಿದ್ದುಪಡಿ ಮಾಡಿಕೊಂಡಿರುವುದಿಲ್ಲ. ನಾನು ಈಗ 7 ವರ್ಷಗಳಿಂದ ನನ್ನ ವಿಳಾಸ ಬದಲಾವಣೆ ಆದ ಬಗ್ಗೆ ನನ್ನ ದಾಖಲೆಗಳಲ್ಲಿ ತಿದ್ದುಪಡಿ ಮಾಡಿಕೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವಾಗ ನನ್ನ ಮತ್ತು ನನ್ನ ಬಾಡಿಗೆ ಮನೆ ಮಾಲೀಕರ ಮಧ್ಯೆ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿ.

ನಾನು ಕರಾರು ಪತ್ರ ಮಾಡಿಕೊಂಡಿರುವ ದಾಖಲೆ ಯಾವುದು ಇರುವುದಿಲ್ಲ. ನಾನು ರಾಜರೆಡ್ಡಿ ಎನ್ನುವವರ ಮನೆಯಲ್ಲಿ ಬಾಡಿಗೆಯಿಂದ ಮೊದಲನೇ ಮಹಡಿಯಲ್ಲಿ ವಾಸವಾಗಿರುತ್ತೇನೆ. ನನಗೆ ಮನೆ ಮಾಲೀಕರ ಜೊತೆ ಬಾಡಿಗೆ ಕರಾರು ಪತ್ರ ಮಾಡಿಕೊಳ್ಳಲು ತೊಂದರೆ ಇರುವುದಿಲ್ಲ. ನನ್ನ ಹತ್ತಿರ ಬಾಡಿಗೆ ಕರಾರು ಪತ್ರ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಬಾಡಿಗೆ ಮನೆ ಮಾಲೀಕರಿಗೆ ಮುಂಗಡ 30 ಸಾವಿರ ಪ್ರತಿ ತಿಂಗಳು ಬಾಡಿಗೆ ರೂ.5 ಸಾವಿರ ನಗದಾಗಿ ಪಾವತಿಸಿರುತ್ತೇನೆ ಆ ಬಗ್ಗೆ ದಾಖಲೆ ಇರುವುದಿಲ್ಲ. ನಾನು ನನ್ನ ತಂದೆಯ ಮನೆಯಿಂದ ಬೇರೆ ಕಡೆ ಬಂದ ನಂತರ ಮೂರು ವಿಳಾಸ ಬದಲಾಯಿಸಿರುತ್ತೇನೆ. ನಾನು ಮೂರು ಬಾಡಿಗೆ ಮನೆಗಳ ವಿಳಾಸವನ್ನು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ವಾಸ್ತವಿಕವಾಗಿ ವಾಸವಾಗಿರುವ ವಿಳಾಸವನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ನಾನು ವಿಳಾಸ ನೀಡಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಗ್ಯಾಸ ಒಲೆ ಬಳಸುವುದಿಲ್ಲ. ನನ್ನ ಹೆಸರಿಗೆ ಬಿ.ಪಿ.ಎಲ್. ಪಡಿತರ ಚೀಟಿ ಇರುತ್ತದೆ. ಸದರಿ ಪಡಿತರ ಚೀಟಿ ನನ್ನ ಮತ್ತು ನನ್ನ ಹೆಂಡತಿ ಮಕ್ಕಳದ್ದಾಗಿರುತ್ತದೆ.

ಈ ದಾವೆ ಸಲ್ಲಿಸಿದ ನಂತರ ನಾನು ಬಿ.ಪಿ.ಎಲ್. ಪಡಿತರ ಚೀಟಿ ಮಾಡಿರುಸಿರುತ್ತೇನೆ. ಮುಂಚೆ ನಮ್ಮ ಕುಟುಂಬದಲ್ಲಿ 6 ಜನರ ಬಿ.ಪಿ.ಎಲ್. ಪಡಿತರ ಚೀಟಿ ಇತ್ತು ಅದರಲ್ಲಿ ನನ್ನ ಮತ್ತು ನನ್ನ ತಂದೆ ತಾಯಿ, ನನ್ನ ತಂದೆಯ ತಾಯಿ, ನನ್ನ ತಮ್ಮ ಮತ್ತು ಅಕ್ಕನ ಹೆಸರಿನಲ್ಲಿ ಇತ್ತು. ಈಗ ನನ್ನ ತಂದೆ ತಾಯಿ ಮತ್ತು ನನ್ನ ತಮ್ಮ, ಅಜ್ಜಿ ಹೆಸರಿಗೆ ಪಡಿತರ ಚೀಟಿ ಇರುತ್ತದೆ. ನಿಪಿ-1 ರಲ್ಲಿ ಇರುವ ಹೆಸರುಗಳು ನಮ್ಮ ಕುಟುಂಬದ ಸದಸ್ಯರ ಹೆಸರುಗಳು ಆಗಿರುತ್ತವೆ ಎಂದರೆ ಸರಿ. ನಿಪಿ-1 ರಲ್ಲಿ ನಮ್ಮ ಕುಟುಂಬದ ಎಲ್ಲ ಸದಸ್ಯರು ಸಹಿ ಮಾಡಿರುತ್ತೇವೆ ಎಂದರೆ ಸರಿ. ದಿಃ- 24-01-2014 ರಂದು ನಮ್ಮ ಕುಟುಂಬದವರು ರೂ.37,68,000/- ಪಡೆದಿರುತ್ತೇವೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ನಾವು ತೆರಿಗೆ ಕಟ್ಟಿರುವುದಿಲ್ಲ ಸಾಕ್ಷಿ ಮುಂದುವರಿದು ಹಣ ನೀಡಿದವರು ತೆರಿಗೆ ಪಾವತಿಸಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿ ನ್ಯಾಯಾಲಯದ ಕಡತದಲ್ಲಿರುವ ವಕಾಲತನಾಮೆಯಲ್ಲಿರುವ 2 ನೇ ಪ್ರತಿವಾದಿ ಸಹಿ ನೋಡಿ ಗುರುತಿಸಿರುತ್ತಾರೆ. ಅದನ್ನು ಪ್ರತಿವಾದಿ 1 ರ ಪರ ವಕೀಲರ ವಿನಂತಿ ಮೇರೆಗೆ ನಿಡಿ-1 ಎಂದು ಸಾಕ್ಷಿ ಇನ್ನೊಂದು ದಿಃ- 04-09-2021 ರ ಹಕ್ಕು ಬಿಡುಗಡೆ ಪತ್ರದಲ್ಲಿ 2 ನೇ ಪ್ರತಿವಾದಿಯ ಸಹಿ ನೋಡಿ ಗುರುತಿಸಿದ್ದು ಅದನ್ನು 1 ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ನಿಡಿ-2 ಎಂದು ಗುರುತಿಸಲಾಯಿತು. **ಸಾಕ್ಷಿ ನಿಡಿ-2 ರಲ್ಲಿರುವ ತನ್ನ ತಂದೆಯ ಸಹಿಗಳನ್ನು ಎಲ್ಲ ಪುಟಗಳಲ್ಲಿ ಇರುವುದಾಗಿ ಒಪ್ಪಿಕೊಳ್ಳುತ್ತಾರೆ. ವಾದಿ ಪರ ವಕೀಲರು ಸದರಿ ದಾಖಲೆ ಜೇರಾಕ್ಸ ಪ್ರತಿ ಆಗಿರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲವೆಂದು ವಾದ ಮಂಡಿಸಿರುತ್ತಾರೆ. ಅದೇ ರೀತಿ ಪ್ರತಿವಾದಿ 1 ರ ಪರ ವಕೀಲರ ಒಂದು ಸಾರಿ ಸಾಕ್ಷಿ ತನ್ನ ಪಾಟೀ**

**ಸವಾಲಿನಲ್ಲಿ ಒಂದು ದಾಖಲೆ ಮತ್ತು ಅದರಲ್ಲಿರುವ ಸಹಿಗಳನ್ನು ಒಪ್ಪಿಕೊಂಡಾಗ ಅದನ್ನು ನಿಶಾನೆಯಾಗಿ ಗುರುತಿಸಬೇಕಾಗುತ್ತದೆ ಎಂದು ವಾದ ಮಂಡಿಸಿರುತ್ತಾರೆ. ಆದ್ದರಿಂದ ಸದರಿ ದಾಖಲೆ ನಿಶಾನೆಯಾಗಿ ಗುರುತಿಸುವ ಕುರಿತು ಹೆಚ್ಚಿನ ವಾದ ವಿವಾದಕ್ಕಾಗಿ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಕೇ. ಹೇ. ಸರಿ ಇದೆ.
Sd/-
(ದಯಾನಂದ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.